ಮೈಸೂರ ಗೆಜೆಟ್ಟು.

ಸರ್ಕಾರದಿಂದ ಪಾಯಿಸ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ|| 13, ಸ್ಯ 1877.

☞ ಈ ಭಾಗವನ್ನು ಪ್ರತ್ಯೇಕ್ ಸೇರಿಸಿ ಇಡುವ ಬ್ಯೆ ಇದಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತೆ.

3ನೇ ಭಾಗ.

ಮಂತ್ರಾಲೋಚಕ ಸಭೆಯೊಳಗಣ ಇಂಡ್ಯ ಗವರ್ನರ್ ಜನರಲ್‌ಯವರ ಆಕ್ಟುಗಳು ವಗೈರೆ.

ನಿಕ್ಷೇಪವನ್ನು ಕುರಿತ ಕಾನೂ ತಿದ್ದುಪಡಿ ಮಾಡಲಿಕ್ಕೆ ಹುಟ್ಟಿದ ಮಸುವಿದಾ ಆಕ್ಟು.

ನಿಕ್ಷೇಪಕ್ಕೆ ಸಂಬಂಧಪಟ್ಟ ಕಾನೂ ತಿದ್ದುಪಡಿ ಮಾಡತಕ್ಕದ್ದು ಯುಕ್ತವಾಗಿರುತ್ತೆಯಾಗಿ ಇದರಿಂದ ನಿರ್ಣಯಿಸಲ್ಪಡುವದೇನಂದರೆ,

ಪ್ರಥಮ ಕ್ರಮ.

ಚಿಕ್ಕ ಹೆಸರು. ಈ ಆಕ್ಟು 1877ನೇ ಇಸವಿಯ, ಇಂಡ್ಯ ದೇಶದ ನಿಕ್ಷೇಪವನ್ನು ಕುರಿತ ಆಕ್ಟು ಯಂಬದಾಗಿ ಕರಿಯಲ್ಪಡ ಬಹುದು.

ವ್ಯಾಪ್ತಿ. ಯಿದು ಬ್ರಿಟಿಷ್ ಇಂಡ್ಯದ ಸರ್ವತ್ರ ವ್ಯಾಪಿಸುತ್ತದೆ.

ಪುರು. ಕೂಡ್ಲೆ ಜಾರೀಗೆ ಬರತಕ್ಕದ್ದು.

ಕಾನೂಗಳ ರದ್ದೀಯಾತಿ. 2. ಯಿದಕ್ಕೆ ಜಂಟಿಸಲ್ಪಟ್ಟಿರತಕ್ಕ ಪೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟ ಕಾನೂಗಳು ಅದೇ ಪೆಡ್ಯೂಲಿನ 3ನೇ ಮದ್ದನಲ್ಲಿ ತಿಳಿಸಲ್ಪಟ್ಟಿರುವ ವರಿಗೂ ರದ್ದಾಗ ತಕ್ಕದ್ದು.

ಅರ್ಥ ವಿವರಣೆ. 3. ಈ ಆಕ್ಟಿನಲ್ಲಿ,

"ನಿಕ್ಷೇಪ" ಯೆಂಬದು ಭಂಗಾರ ನಾಣ್ಯ, ಬೆಳ್ಳಿನಾಣ್ಯ.

"ನಿಕ್ಷೇಪ" ಪಾಳ, ತಯಾರ್ಮಾಡಲ್ಪಟ್ಟ ಸ್ಥಿತಿಯಲ್ಲಿರುವ ಭಂಗಾರ ವ ಬೆಳ್ಳಿ, ರತ್ನಗಳು ವ ಇತರಬೆಲೆಯಳ್ಳಮಾಲ್, ಇವುಗಳನ್ನು ಅಡಗಿಸಿಕೊಂಡಿರುತ್ತೆ.

"ಕಲೆಕ್ಟರ್" ಅಂದರೆ (1)ವೊಂದು ಡಿಸ್ಟ್ರಿಕ್ಟಿನ ಕಲೆಕ್ಟರ್ (2) ಡಿಪ್ಯುಟೆ ಕಮಿಷ್ನರ್ ಮತ್ತು (3) ಈ ಆಕ್ಟಿಗನುಗುಣವಾಗಿ ವೊಬ್ಬ ಕಲೆಕ್ಟರವರ ಕೆಲಸಗಳನ್ನು ನೆರವೇರಿಸುವ ಬಗ್ಯೆ ಸ್ಥಳಿಕ ಗವರ್ಮೆಂಟಿನವರಿಂದ ವೊಕರರ್ಮಾಡಲ್ಪಟ್ಟ ಯಾವನಾದರೂ ವೊಬ್ಬ ಆಫೀಸರ್.

"ಕಲೆಕ್ಟರ್"

ನಿಕ್ಷೇಪವನ್ನು ಕಂಡ ಕೂಡ್ಲೆ ನಡಿಸಬೇಕಾವ ಕ್ರಮ.

4. ಮೊಬಲಗಿನಲ್ಲಾಗಲಿ ಕಿಮ್ಮತಿನಲ್ಲಾಗಲಿ 25 ರೂಪಾಯಿಗಳಿಗೆ ಮಿಗಿರಿದ ಯೊಂದು ನಿಕ್ಷೇಪವು ಭೂಮಿಯಲ್ಲಿ ಹೂಳಿಟ್ಟಿರುವಂತೆಯಾಗಲಿ, ಅನ್ಯಥಾ ಗುಪ್ತ ಪಡಿಸಿರುವಂತೆಯಾಗಲಿ ಕಂಡು ಹಿಡಿಯಲ್ಪಟ್ಟಲ್ಲಿ, ಕಂಡು ಹಿಡಿದವನು ಸಾಧ್ಯವಾದಷ್ಟು ತ್ವರೆಯಾಗಿ ಕಲೆಕ್ಟರ್ ಯವರಿಗೆ ಒರಹು ಮೂಲಕ ಈ ಕೆಳಗೆ ಕಂಡ ತಪಶೀಲ್‌ಗಳುನಿಶಿ ಯೊಂದು ನೋಟಿಸ್ ಕೊಡತಕ್ಕದ್ದು.

ನಿಕ್ಷೇಪವನ್ನು ಕಂಡವನಿಂದ ನೋಟೀಸ್.

(a) ಹಾಂಗೆ ಕಂಡ ನಿಕ್ಷೇಪದ ಸ್ವರೂಪ ಮೊಬಲಗ್ ಯಾ ಷುಮಾರ್ ಕಿಮ್ಮತ್.

(b) ಯಲ್ಲಿ ಅದು ಕಾಣಲ್ಪಟ್ಟಿತ್ತೋ ಆ ಸ್ಥಳ.

(c) ಕಂಡ ತಾರೀಖು.

ಮತ್ತು ಸದರೀ ನಿಕ್ಷೇಪವನ್ನು ಸರಕಾರ ಖಜಾನೆಯಲ್ಲಿ ಯಿರಿಸತಕ್ಕದ್ದು, ಅಥವಾ ಸದರೀನಿಕ್ಷೇಪವನ್ನು ಕಲೆಕ್ಟರವರು ಆಗಿಂದಾಗ್ಯೆ ಅಪೇಕ್ಷಿಸುವ ಸ್ಥಳದಲ್ಲಿಯೂ ವ ಕಾಲದಲ್ಲಿಯೂ ರಾಜರ್ಮಾಡತಕ್ಕ ಬಗ್ಗೆ ಕಲೆಕ್ಟರವರಿಗೆ ಯುಕ್ತ ತೋರುವಷ್ಟು ಜಾಮೀನ್ ಕೊಡತಕ್ಕದ್ದು.

ನೋಟಿಸ್ ತಲಪಿದ ಬಳಿಕ ಕಲೆಕ್ಟರವರ ನಡವಳಿತ.

5—4ನೇ ಸೆಕ್ಷನ್ ಪ್ರಕಾರ ನೋಟಿಸ್ ತಲಪಿದ ಮೇಲೆ ಕಲೆಕ್ಟರವರು ಈ ಕೆಳಗೆನಮೂದಿಸಲ್ಪಡುವ ಕ್ರಮಗಳನ್ನು ಅನುಸರಿಸತಕ್ಕದ್ದು,—ಯಾವದಂದರೆ.

(a.) ಈ ವಿಷಯದಲ್ಲಿ ಸ್ಥಳಿಕ ಗವರ್ಮೆಂಟಿನವರು ಆಗಿಂದಾಗ್ಯೆ ನಿಧಿಸುವ ರೀತಿಯಲ್ಲಿ, ಕಲೆಕ್ಟರವರು, ಫಲಾನಾ ತಾರೀಖಿನಲ್ಲಿ (ತಾರೀಕ್ ನಮೂದಿಸಿ) ಫಲಾನಾ ನಿಕ್ಷೇಪ (ಅದರ ಸ್ವರೂಪ, ಮೊಬಲಗ್ ವ ಷುಮಾರ್ ಕಿಮ್ಮತ್ ನಮೂದಿಸಿ) ಫಲಾನಾ ಸ್ಥಳದಲ್ಲಿ (ಸ್ಥಳ ನಮೂದಿಸಿ) ಕಾಣ ಬಂದಿರುತ್ತೆಂದು, ಯೊಂದು ಇಸ್ತಿಹಾರನ್ನು ಘಾಯಿಷ್ ಮಾಡತಕ್ಕದ್ದು. ಮತ್ತು ಸದರೀ ನಿಕ್ಷೇಪಕ್ಕಾಗಲಿ, ಆಪೈಕಿ ಯಾವ ಭಾಗಕ್ಕಾಗಲಿ ಅದರಲ್ಲಿ ಯಾವ ಸಂಬಂಧಕ್ಕಾಗಲಿ ದಾವೆ ಮಾಡುವ ದರೋಜನ್ನು ಜನಗಳೂ ಖುದ್ದಾಗಿ ಅಥವಾ ಮುಖ್ತಾರೀಕನ ಮೂಲಕ ಕಲೆಕ್ಟರ್‌ಯವರ ರೂಬರೂ ಸದರೀ ಇಸ್ತಿಹಾರಿನಲ್ಲಿ ನಮೂದಿಸಲ್ಪಟ್ಟ ದಿನ ವ ಸ್ಥಳದಲ್ಲಿ ಹಾಜರಾಗುವಂತೆ ಕೋರಲ್ಪಡತಕ್ಕದ್ದು. ಸದರೀ ದಿನವು ಅಂತಾ ನೋಟಿಸ್ ಘಾಯಿಷ್ ಆದ ತಾರೀಖು ತರುವಾಯ ಆರು ತಿಂಗಳ ಒಳಗೆ ಯೊಂದು ದಿನವಾಗಿರತಕ್ಕದ್ದಲ್ಲವು.

(b) ಯಾವ ಸ್ಥಳದಲ್ಲಿ ನಿಕ್ಷೇಪವು ಕಾಣಲ್ಪಟ್ಟಿತ್ತೋ ಅಂತಾ ಸ್ಥಳವು ನಿಕ್ಷೇಪ ಕಾಣಲ್ಪಟ್ಟ ತಾರೀಖಿನಲ್ಲಿ ಅದನ್ನು ಕಂಡವನಲ್ಲದ ಇತರ ಮನುಷ್ಯನ ಸ್ವಾಧೀನದಲ್ಲಿದ್ದ ಪಕ್ಷದಲ್ಲಿ, ಕಲೆಕ್ಟರವರು ಅಂತಾ ಮನುಷ್ಯನಿಗೆ ಮೇಲೆ ತಿಳಿಸಲ್ಪಟ್ಟ ತಪಶೀಲ್‌ನಿಶಿ ಒರಹು ಮೂಲಕ ಯೊಂದು ಮುಖ್ಯವಾದ ನೋಟಿಸನ್ನು ಜಾರೀ ಮಾಡಿಸತಕ್ಕದ್ದು.

6. ಹಾಂಗೆ ಪ್ರಸಿದ್ಧಪಡಿಸಲ್ಪಟ್ಟ ದಿನಕ್ಕೆ ಮುಂಚಿತವಾಗಿ ಯಾವ ಕಾಲದಲ್ಲಾದರೂ ಕಲೆಕ್ಟರವರು ತಮ್ಮ ಖುದ್ದು ಒರಹು ಮೂಲಕ, ಸದರೀ ನಿಕ್ಷೇಪವನ್ನಾಗಲಿ, ಆಪೈಕಿ ವಿವರಿಸಲ್ಪಟ್ಟ ಯಾವ ಭಾಗವನ್ನಾಗಲಿ, ಆ ನಿಕ್ಷೇಪದ ಯಾ ಭಾಗದ ವಾಜಬೀ ಕಿಮ್ಮತಿಗೆ ಸರಿಯಾದ ಮೊಬಲಗನ್ನು ಮತ್ತು ಅಂತಾ ಕಿಮ್ಮತಿನ ಏದರ

ಸರಕಾರ ತರಪೆ ನಿಕ್ಷೇಪವನ್ನು ಪಡಿಯಲಿಕ್ಕೆ ಉದ್ದೇಶವನ್ನು ತೋರಿಸತಕ್ಕ ಅಧಿಕಾರ.

ಲ್ಲಿ 1 ಭಾಗಕ್ಕೆ ಸರಿಯಾದ ಮೊಬಲಗನ್ನು ಸದರೀ ನಿಕ್ಷೇಪದಲ್ಲಿ ಸಂಬಂಧ ವುಂಟಾಗಿರತಕ್ಕ ಜನಗಳಿಗೆ ಪಾವತೀ ಮಾಡಿ ಸರಕಾರ ತರಫ್ ಪಡೆಯಲಿಕ್ಕೆ ತಮ್ಮ ಉದ್ದೇಶವನ್ನು ಬಹಿರಂಗವಾಗಿ ತಿಳಿಸಬಹುದು. ಆಬಳಿಕ ಮೇಲೆ ನ ಮೂದಿಸಲ್ಪಟ್ಟ ಮೊಬಲಗ್ ಕೊಡಲಿಕ್ಕೆ ವೊಳಪಟ್ಟು ಸದರೀ ನಿಕ್ಷೇಪವು ಯಾ ಭಾಗವು ಸರಕಾರ ಸ್ವತ್ತಾಗಿ ಭೂ ವಿಸಲ್ಪಡತಕ್ಕದ್ದು.

7. 5ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧ ಪಡಿಸಿದದಿನ ಕಲೆಕ್ಟರವರು ಸದರೀ ನಿಕ್ಷೇಪವನ್ನು ತಮ್ಮ ರೂಬರೂ ಹಾಜರ್ಮಾಡಿಸಿಕ್ಕೊಂಡು ಅದರ ಕಿಮ್ಮತ್ ಪರಿಶೋಧಿಸಿ ಬಳಿಕ (ಈ ಕೆಳಗೆ ವಿಧಿಸಲ್ಪಟ್ಟ ರೂಲ್ಸಿಗೆ ಅನುಗುಣವಾಗಿ) ಅದರಲ್ಲಿ ಸಂಬಂಧ ಉಂಟಾಗಿರುವ ಜನಗಳನ್ನು ಮತ್ತು ಅವರುಗಳಿಗೆ ಪ್ರತ್ಯೇಕ ಪ್ರತ್ಯೇಕ ವಾಗಿ ಸಲ್ಲಬೇಕಾದ ಮೊಬಲಗನ್ನು ನಿಷ್ಕರ್ಷೆ ಸಹಾ ಮಾಡತಕ್ಕದ್ದು.

ನಿಕ್ಷೇಪದ ಕಿಮ್ಮತ್ ಮತ್ತು ಅದರ ಹಕ್ಕುದಾರರ ವಿಚಾರಣೆ ಕ್ರಮ.

ಅಂತಾ ವಿಚಾರಣೆ ಬಗ್ಗೆ, ಸಿವಿಲ್ ಪ್ರೊಸೀಡ್ಯೂರ್‌ಕೋಡು ಪ್ರಕಾರ ಬಂದು ಸಿವಿಲ್‌ಕೋರ್ಟಿಗೆ ಯಾವ ಸಾಧನಗಳು ಮತ್ತು ಯಾವ ವಿಧ ಏರ್ಪಡಿಸಲ್ಪಟ್ಟಿರುತ್ತೋ ಅದೇ ಸಾಧನಗಳ ಮೂಲಕ ಮತ್ತು (ಯೆಷ್ಟರವರಿಗೆ ಇರುತ್ತೋ ಅಷ್ಟರವರಿಗೆ,) ಅದೇ ವಿಧವಾಗಿ, ಕಲೆಕ್ಟರವರು ಸಾಕ್ಷಿಗಳನ್ನು ಸಮ್ಮನ್ ಮಾಡಬಹುದು, ಮತ್ತು ಅವರು ಹಾಜರಾಗಲಿಕ್ಕೆ ನಿರ್ಬಂಧಿಸಬಹುದು, ಮತ್ತು ದಸ್ತಾವೇಜುಗಳನ್ನು ಹಾಜರ್ಮಾಡಲಿಕ್ಕೆ ಬಲಾತ್ಕರಿಸಬಹುದು, ನೋಟಿಸ್ ಪ್ರಕಾರ ಯಾವ ಹಕ್ಕುದಾರನು ಹಾಜರಾಗದೆ ಇದ್ದಲ್ಲಿ ಅಥವಾ ಮತ್ಯಾವ ಸಬಬಿನ ಮೇಲಾಗಲಿ ಕಲೆಕ್ಟರವರು ಯುಕ್ತವೆಂದು ಯೋಚಿಸುವ ಪಕ್ಷದಲ್ಲಿ ಸದರೀ ವಿಚಾರಣೆಯನ್ನು ಅವರಿಂದ ಆಗಿಂದಾಗ್ಯೆ ಗೊತ್ತು ಮಾಡಲ್ಪಡುವ ದಿನದವರಿಗೂ ನಿಲ್ಲಿಸಬಹುದು.

8. ಈ ಆಕ್ಟುಮೇರೆ ದಾವೆಗಳನ್ನು ಮತ್ತು ಹಕ್ಕುದಾರುಗಳಿಗೆ ಸಲ್ಲಬೇಕಾದ ಮೊಬಲಗನ್ನು ದೃಢ ಪಡಿಸುವಲ್ಲಿ ಕಲೆಕ್ಟರವರು ಇದರಡಿ ಬರುವ ನಿಬಂಧನೆಗಳ ಪ್ರಕಾರ ನ ಡೆಯುತಕ್ಕದ್ದು—ಯಾವವೆಂದರೆ:—

ಕಲೆಕ್ಟರವರ ನಡವಳಿತದ ಬಗ್ಗೆ ರೂಲ್ಸ್.

(a) ಸದರೀ ನಿಕ್ಷೇಪವು ಕಂಡು ಹಿಡಿಯಲ್ಪಟ್ಟ ತಾರೀಖಿನಿಗೆ ಮುಂಚೆ ನೂರು ವರುಷಗಳಿಗೆ ಹೆಚ್ಚಾಗಿ ಗುಪ್ತ ಪಡಿಸಲ್ಪಟ್ಟಿತೆಂದು ಆಲೋಚಿಸಲಿಕ್ಕೆ ಕಾರಣವಿರುವಪಕ್ಷದಲ್ಲಿ ಸದರೀ ನಿಕ್ಷೇಪವನ್ನು ಕಂಡು ಹಿಡದವನ ಮತ್ತು ಯಾವ ಸ್ಥಳದಲ್ಲಿ ಆ ನಿಕ್ಷೇಪವು ಕಾಣಲ್ಪಟ್ಟಿತ್ತೋ ಆ ಸ್ಥಳದ ಮಾಲೀಕನ ದಾವೆ ಶಿವಾಯಿ ಮತ್ಯಾರ ದಾವೆಯನ್ನಾಗಲಿ ಕಲೆಕ್ಟರವರು ಅಂಗೀಕರಿಸಕೂಡದು.

(b) ಜನಗಳ ಪ್ರಯೋಜನಕ್ಕಾಗಿ ಯಾವದಾದರೂ ವಂದು ಕಾಮುಗಾರಿ (ಅಂದರೆ ವೊಂದು ರಸ್ತೆ, ರೇಯಿಲ್ ಮಾರ್ಗ, ಯಾ ವೊಂದು ನಾಲಾ) ನಡಿಯುತ್ತಿರುವಲ್ಲಿ ಸದರೀ ನಿಕ್ಷೇಪವು ಕಾಣಲ್ಪಟ್ಟು ಅದನ್ನು ಕಂಡು ಹಿಡಿದವನ ಶಿವಾಯಿ ಮತ್ಯಾರೂ ಹಕ್ಕುದಾರು ಯಿಲ್ಲದ ಪಕ್ಷದಲ್ಲಿ ಆ ಮೊಬಲಗ್ ಪೈಕಿ ಮುಪ್ಪಾಗಪಾಲು ಅಥವಾ ಕಲೆಕ್ಟರವರು ಯಿಷ್ಟ ಪಟ್ಟರೆ ಆ ನಿಕ್ಷೇಪದ ಕಿಮ್ಮತ್ತಾಗಲಿ ಅದನ್ನು ಕಂಡು ಹಿಡದವನಿಗೆ ಕೊಡಲ್ಪಟ್ಟು ಬಾಕೀ ಸರಕಾರಕ್ಕೆ ಸೇರಿಸಿಕೊಳ್ಳಲ್ಪಡತಕ್ಕದ್ದು.

(c) ವೊಬ್ಬ ಖುಷ್‌ಬಾಷ್ ಮನುಷ್ಯನಿಗೆ ಸೇರಿದ ವೊಂದು ಸ್ಥಳದಲ್ಲಿ ಸದರೀ ನಿಕ್ಷೇಪವು ಕಂಡು ಹಿಡಿಯಲ್ಪಟ್ಟು ಅಂತಾ ಮನುಷ್ಯನೂ, ನಿಕ್ಷೇಪ ಕಂಡು ಹಿಡದವನೂ, ಸಹಾ ನಿಕ್ಷೇಪದ ಹಂಚಿಕೆ ವಿಷಯದಲ್ಲಿಆಗ್ಯೆ ಜಾರೀಯಲ್ಲಿರುವ ಪ್ರಕಾರ ವೊಂದು ಕರಾರು ಮಾಡಿಕ್ಕೊಳ್ಳದಿಯಿದ್ದ ಪಕ್ಷದಲ್ಲಿ ಆ ನಿಕ್ಷೇಪದ ಪೈಕಿ ಮುಪ್ಪಾಗಪಾಲು ಅದನ್ನು ಕಂಡು ಹಿಡಿದವನಿಗೂ ಬಾಕೀ ಅದು ಯಾವ ಸ್ಥಳದಲ್ಲಿ ಕಂಡು ಹಿಡಿಯಲ್ಪಟ್ಟಿತೋ ಆ ಸ್ಥಳದ ಮಾಲೀಕನಿಗೂ ಹಂಚಲ್ಪಡತಕ್ಕದು. ಅಂತಾ ಮಾಲೀಕನು, ನಿ

ಕ್ಷೇಪ ಕಂಡು ಹಿಡಿದವನು ಸಹಾ ಅಂತಾ ವೊಂದು ಕರಾರು ಮಾಡಿಕೊಂಡಿರುವ ಪಕ್ಷದಲ್ಲಿ ಆ ನಿಕ್ಷೇಪವು ಅದಕ್ಕೆ ಅನುಗುಣವಾಗಿ ಹಂಚಲ್ಪಡತಕ್ಕದ್ದು.

(d) ನಿಕ್ಷೇಪ ಪೂರ್ತವಾಗಲಿ ಆ ಪೈಕಿ ಯಾವ ಭಾಗವಾಗಲಿ ಪಡೆಯಲಿಕ್ಕೆ ತಮ್ಮ ಉದ್ದೇಶವನ್ನು ಕಲೆಕ್ಟರವರು 6ನೇ ಸೆಕ್ಷನ್ ಪ್ರಕಾರ ಬಹಿರಂಗವಾಗಿ ತಿಳಿಸಿದ್ದಲ್ಲಿ ಕಲೆಕ್ಟರವರು (ಈ ಸೆಕ್ಷನ್ನಿನ (a) (b) (c) ಕ್ಲಾಜ್‌ಗಳಲ್ಲಿ ಯೇನು ಆಡಗಿದ್ದಾಗ್ಯೂ) ಅದನ್ನು ಜಾರೀಗೆ ತರತಕ್ಕದ್ದು. ಮತ್ತು ಅಂತಾ ಸಂಗತಿಯಲ್ಲಿ ನಿಕ್ಷೇಪವನ್ನು ಕುರಿತು ಅನೇಕ ಕ್ಲಾಜ್‌ಗಳ ನಿಬಂಧನೆಗಳು, 6ನೇ ಸೆಕ್ಷನ್ ಅನುಗುಣವಾಗಿ ಅಂತಾ ನಿಕ್ಷೇಪಕ್ಕೆ ಅಥವಾ ಆ ಪೈಕಿ ವೊಂದು ಭಾಗಕ್ಕೆ ಕೊಡಬೇಕಾದ ಮೊಬಲಗಿನ ವಿಷಯದಲ್ಲಿ, ಲಗಾವಾಗುತ್ತೆಂದು ಯೆಣಿಸಲ್ಪಡತಕ್ಕದ್ದು.

9. ಈ ಆಕ್ಟ್ ಅನುಸರಿಸಿ ಕಲೆಕ್ಟರವರು ಮಾಡಿದ ಯಾವ ಫೈಸಲ್ ಮೇಲೆ ಯಾವ ಅಪ್ಪೀಲ್ ಹಿಡಿಯಲ್ಪಡಕ್ಕದ್ದಲ್ಲ ಮತ್ತು ಇದರದೆಯಿಂದ ಕೊಡಲ್ಪಟ್ಟ ಅಧಿಕಾರವನ್ನು ನಡಿಸುವಲ್ಲಿ ಪ್ರಾಮಾಣಿಕವಾಗಿ ಮಾಡಲ್ಪಟ್ಟ ಯಾವ ಕೆಲಸಕ್ಕೋ ಸ್ಕರವಾಗಲಿ ಕಲೆಕ್ಟರವರ ಮೇಲೆ ಯಾವ ದಾವಾ ಯಾ ನಡವಳಿಕೆ ನಡಿಸಲ್ಪಡಕೂಡದು.

ಕಲೆಕ್ಟರವರ ಫೈಸಲ್ ಮೇಲೆ ಅಪ್ಪೀಲ್, ಮತ್ತು ಅವರು ಪ್ರಾಮಾಣಿಕವಾಗಿ ನೆರವೇರಿಸಿದ ಕೆಲಸಗಳಿಗಾಗಿ ಅವರಮೇಲೆ ತರಲ್ಪಡುವ ದಾವೆಗಳು ಇವುಗಳ ನಿಷೇಧ.

ದಂಡನೆಗಳು.

10. ಈ ಆಕ್ಟ್ ಲಗಾವಾಗುವ ಯಾವ ನಿಕ್ಷೇಪವನ್ನಾಗಲಿ ಕಂಡು ಹಿಡಿದವನು 4ನೇ ಸೆಕ್ಷನ್ ಪ್ರಕಾರ ನೋಟಿಸ್ ಕೊಡಲಿಕ್ಕೆ ಯಾ ಡಿಪಾಜಿಟ್ ಯಿಡಲಿಕ್ಕೆ ಯಾ ಜಾಮೀನ್ ಕೊಡಲಿಕ್ಕೆ ತಪ್ಪಿದಲ್ಲಿ ಅಂತಾ ನಿಕ್ಷೇಪದ ಪೈಕೀ ಅವನಿಗೆ ಸಲ್ಲತಕ್ಕ ಹಿಸ್ಸೆಯಾಗಲಿ, 6ನೇ ಸೆಕ್ಷನ್ ಪ್ರಕಾರ ಅಂತಾ ನಿಕ್ಷೇಪಕ್ಕೆ ಯಾ ಆ ಪೈಕಿ ವೊಂದು ಭಾಗಕ್ಕೆ ಸಲ್ಲತಕ್ಕ ಖರೀದಿ ಮೊಬಲಗಿನಲ್ಲಿ ಅವನಿಗೆ ಸಲ್ಲತಕ್ಕ ಹಿಸ್ಸೆ ಮೊಬಲಗಾಗಲಿ ಸರಕಾರಕ್ಕೆ ಸೇರತಕ್ಕದ್ದು.

ನಿಕ್ಷೇಪ ಕಂಡು ಹಿಡಿದವನು ನೋಟೀಸ್ ಕೊಡಲಿಕ್ಕೆ ಆದನ್ನು ಯಿರಸಲಿಕ್ಕೆ ಯಾ ಜಾಮೀನ್ ಕೊಡಲಿಕ್ಕೆ ತಪ್ಪಿದರೆ ದಂಡನೆ.

ಮತ್ತು ಆ ಮನುಷ್ಯನು ವೊಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟ ಮೇಲೆ ಅಂತಾ ನಿಕ್ಷೇಪದ ವಾಜಬೀ ಕಿಮ್ಮತ್ತಿಗೆ ಜಾಸ್ತಿಯಾಗದ ವೊಂದು ಜರ್ಮಾನೆಗೂ ಅವನ್ನು ಕೊಡಲಿಕ್ಕೆ ತಪ್ಪಿದಲ್ಲಿ 12 ತಿಂಗಳ ಪರಿಯಂತ ವೊಂದು ವಾಯಿದೆ ವರಿಗೆ ಖೈದಿಗೂ ಗುರಿಯಾಗಿರತಕ್ಕದ್ದು.

11. ಈ ಆಕ್ಟ್ ಲಗಾವಾಗುವ ಯಾವ ನಿಕ್ಷೇಪವಾಗಲಿ ಯಾವ ಸ್ಥಳದಲ್ಲಿ ಕಂಡು ಹಿಡಿಯಲ್ಪಟ್ಟಿತ್ತೋ ಆ ಸ್ಥಳದ ಮಾಲೀಕನು, ಪಿಸಲೆಕೋಡ್ ಅರ್ಥಕ್ಕೆ ವೊಳಪಟ್ಟು, 4ನೇ ಸೆಕ್ಷನ್ ಪ್ರಕಾರ ಕೊಡಬೇಕಾದ ನೋಟಿಸ್ ಕೊಡಲಿಕ್ಕೆ ತಪ್ಪುವಂತೆ ಯೂ ಅಥವಾ ನಿಕ್ಷೇಪವನ್ನು ಡಿಪಾಜಿಟ್ ಯಿಡಲಿಕ್ಕೆ ಅಥವ ಜಾಮೀನ್ ಕೊಡಲಿಕ್ಕೆ ತಪ್ಪುವಂತೆಯೂ ಮುದ್ದತ್ ಮಾಡಿದಲ್ಲಿ ಅಂತಾ ನಿಕ್ಷೇಪದ ಪೈಕೀ ಅವನಿಗೆ ಸಲ್ಲತಕ್ಕ ಹಿಸ್ಸೆಯಾಗಲಿ 6ನೇ ಸೆಕ್ಷನ್ ಪ್ರಕಾರ ಅಂತಾ ನಿಕ್ಷೇಪಕ್ಕೆ ಯಾ ಆ ಪೈಕಿ ವೊಂದು ಭಾಗಕ್ಕೆ ಸಲ್ಲತಕ್ಕ ಖರೀದಿ ಮೊಬಲಗಿನಲ್ಲಿ ಅವನಿಗೆ ಸಲ್ಲತಕ್ಕ ಹಿಸ್ಸೆ ಮೊಬಲಗಾಗಲಿ ಸರಕಾರಕ್ಕೆ ಸೇರತಕ್ಕದ್ದು.

ಮಾಲೀಕನು 10ನೇ ಸೆಕ್ಷನ್ ಪ್ರಕಾರ ತಕರೀರ್ ಮುದ್ದತ್ ಮಾಡಿದರೆ ದಂಡನೆ.

ಮತ್ತು ಆ ಮನುಷ್ಯನು ವೊಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟ ಮೇಲೆ ಅಂತಾ ನಿಕ್ಷೇಪದ ವಾಜಬೀ ಕಿಮ್ಮತ್ತಿಗೆ ಜಾಸ್ತೀಯಾಗದ ವೊಂದು ಜರ್ಮಾನೆಗೂ ಅದನ್ನು ಕೊಡಲಿಕ್ಕೆ ತಪ್ಪಿದಲ್ಲಿ 6 ತಿಂಗಳ ಪರಿಯಂತ ವೊಂದು ವಾಯಿದೆ ವರಿಗೆ ಖೈದಿಗೂ ಗುರಿಯಾಗಿರತಕ್ಕದ್ದು.

26
49

ಷೆಡ್ಯೂಲ್.

ಚಟ್ಟಗಳ ನಂಬರ್ ವ ತಾರೀಖು.	ಹೆಸರು.	ರದ್ದೀಯಾತಿಯ ವ್ಯಾಪ್ತಿ.
1817ನೇ ಇಸವಿ 5ನೇ ಬಂಗಾಳ ಕಾಯಿದೆ.	ನಿಕ್ಷೇಪದ ವಿಷಯದಲ್ಲಿ ಸರಕಾರದ ಮತ್ತು ಜನಗಳ ಹಕ್ಕುಗಳನ್ನು ತಿಳಿಯಪಡಿಸತಕ್ಕ ಬಗ್ಯೂ ಅಂತಾ ನಿಕ್ಷೇಪ ಕಂಡು ಹಿಡದ ಮೇಲೆ ಅನುಸರಿಸಲ್ಪಡಬೇಕಾದ ನಿಬಂಧನೆಗಳನ್ನು ವಿಧಿಸುವಬಗ್ಯೂ ಹುಟ್ಟಿದ ಕಾಯಿದೆ.	ಪೂರಾ
1832ನೇ ಇಸವಿ 11ನೇ ನಂಬರ್ ಮದ್ರಾಸ್ ಕಾಯಿದೆ.	ನಿಕ್ಷೇಪದ ವಿಷಯದಲ್ಲಿ ಸರಕಾರದ ಮತ್ತು ಜನಗಳ ಹಕ್ಕುಗಳನ್ನು ತಿಳಿಯಪಡಿಸತಕ್ಕ ಬಗ್ಯೂ ಅಂತಾ ನಿಕ್ಷೇಪ ಕಂಡು ಹಿಡದ ಮೇಲೆ ಅನುಸರಿಸಲ್ಪಡಬೇಕಾದ ನಿಬಂಧನೆಗಳನ್ನು ವಿಧಿಸುವಬಗ್ಯೂ ಹುಟ್ಟಿದ ಕಾಯಿದೆ.	ಡಿಟೋ
1838ನೇ ಇಸವಿ 12ನೇ ನಂಬರ್ ಆಕ್ಟ್.	ನಿಕ್ಷೇಪವನ್ನು ಕುರಿತದ್ದು (ಮದ್ರಾಸ್)	ಡಿಟೋ
1872ನೇ ಇಸವಿಯ 4ನೇ ನಂಬರ್ ಆಕ್ಟ್.	ನಿಬಂಧನೆಗಳು, ಚಟ್ಟಗಳು ವ ಕಾಯಿದೆಗಳು ಇವುಗಳ ಪೈಕಿ ಯಾವವು ಪಂಜಾಬಿನಲ್ಲಿ ಕಾರ್ಯ ಬಲವುಳ್ಳದ್ದಾಗಿರುವವೆಂದು ತಿಳಿಸಲಿಕ್ಕೂ ಮತ್ತು ಯಿತರ ಕಾರ್ಯಗಳಿಗೂ ಹುಟ್ಟಿದ ಆಕ್ಟ್.	1817ನೇ ಇಸವಿ 5ನೇ ನಂಬರ್ ಬಂಗಾಳ ಕಾಯಿದೆ ಕುರಿತ ಮಟ್ಟಿಗೆ.
1874ನೇ ಇಸವಿ 15ನೇ ನಂಬರ್ ಆಕ್ಟ್.	ಸ್ಥಳಿಕ ವ್ಯಾಪ್ತಿ, ಕಾರ್ಯಗಳು.	2ನೇ ಷೆಡ್ಯೂಲಿನಲ್ಲಿ 1832ನೇ ಇಸವೀ 11ನೇ ನಂಬರ್ ಮದ್ರಾಸ್ ಕಾಯಿದೆಗಳು ಕುರಿತಮಟ್ಟಿಗೆ 4ನೇ ಷಡ್ಯೂಲನಲ್ಲಿ 1817ನೇ ಇಸವೀ 5ನೇ ನಂಬರ್ ಬಂಗಾಳಾ ಕಾಯಿದೆಗಳು ಕುರಿತ ಮಟ್ಟಿಗೆ.
1875ನೇ ಇಸವಿ 17ನೇ ನಂಬರ್ ಆಕ್ಟ್.	ಬ್ರಿಟಿಷ್ ಬರ್ಮಾದಲ್ಲಿರುವ ಕೋರ್ಟುಗಳಿಗೆ ಸಂಬಂಧಪಟ್ಟ ಕಾನೂನನ್ನು ವೋಟ್ಟುಪಡಿಸಿ ತಿದ್ದುಪಡಿಮಾಡತಕ್ಕ ಬಗ್ಯೂ ಯಿತರ ಕಾರ್ಯಗಳಬಗ್ಯೂ ಹುಟ್ಟಿದ ಆಕ್ಟ್.	1817ನೇ ಇಸವಿ 5ನೇ ನಂಬರ್ ಬಂಗಾಳಾ ಕಾಯಿದೆಗಳು ಕುರಿತಮಟ್ಟಿಗೆ.
1875ನೇ ಇಸವಿ 20ನೇ ನಂಬರ್ ಆಕ್ಟ್.	ಸೆಂಟ್ರಲ್ ಪ್ರಾವಿನ್ಸಗಳಲ್ಲಿ ಜಾರೀಯಲ್ಲಿರುವ ಕಾನೂನನ್ನು ತಿಳಿಸತಕ್ಕ ಬಗ್ಯೂ ತಿದ್ದುಪಡಿ ಮಾಡತಕ್ಕ ಬಗ್ಯೂ ಹುಟ್ಟಿದ ಆಕ್ಟ್.	ಡಿಟೋ
1876ನೇ ಇಸವಿ 18ನೇ ನಂಬರ್ ಆಕ್ಟ್.	ಔಡ್ ಕಾರ್ಯಗಳ ಆಕ್ಟ್.	ಡಿಟೋ

ಉದ್ದೇಶಗಳ ವ ಕಾರಣಗಳ ವಿವರಣೆ.

ನಿಕ್ಷೇಪವನ್ನು ಕುರಿತ ಕಾರ್ಯ ಬಹಳ ಅತೃಪ್ತಿಕರವಾದ ಸ್ಥಿತಿಯಲ್ಲಿದೆ, ಪ್ರಕೃತದಲ್ಲಿ ಮದ್ರಾಸಿನಲ್ಲಿ ಬಂದು ವಿಧವಾದ ಕಾರ್ಯ ಬಂಗಾಳದಲ್ಲಿ ಮತ್ತೊಂದು ವಿಧವಾದ ಕಾರ್ಯ, ಮುಂಬಾಯಿನಲ್ಲಿ ಯಾವ ವಿಧವಾ ವ ಕಾರ್ಯ ಇರುತ್ತೋ ಅದೇ ಸಂದೇಹವಾಗಿರುತ್ತೆ, ಮತ್ತು ಸದರೀ 3 ಪ್ರೆಸೀಡೆನ್ಸೀ ಪಟ್ಟಣಗಳಲ್ಲಿ ಪ್ರಾಯಶಃ

ಇಂಗ್ಲೀಷ್ ಕಾನೂನ್ ವ್ಯಾಪಕಗೊಂಡಿರುತ್ತೆ, ಇದಲ್ಲದೆ ಸರ್ವತ್ರ ಈ ವಿಷಯದ ಕಾನೂನ್ ವಿರುದ್ಧವಾಗಿಯು ನಿಷ್ಪ್ರಯೋಜನವಾಗಿಯು ಯಿರುತ್ತಲ್ಲದೆ (ನಿಕ್ಷೇಪ) ಕಂಡು ಹಿಡಿದವರು ಅವರು ಕಂಡು ಹಿಡದಂತಾದ್ದನ್ನು ಬೈಚಿಡಲಿಕ್ಕೂ ತೆಗದುಕೊಂಡುಹೋಗಿ ಬಿಡಲಿಕ್ಕೂ ಯಲ್ಲ ಪ್ರೇರೇಪಣೆಯನ್ನು ಉಂಟುಮಾಡುತ್ತದೆ, ಆದಾಗ್ಯೂ ಇನ್ನೂ ಬಹಳ ಧನವು ಇಂಡ್ಯದೇಶದೊಳು ಹೂಳಡಲ್ಪಟ್ಟಿರುತ್ತೆ, ಆ ಪೈಕೀ ಅನೇಕವು ಪುರಾತನವಾಗಿಯೂ ಚರಿತೆ, ಸಂಬಂಧವುಳ್ಳದ್ದಾಗಿಯೂ ಇರುತ್ತೆ.

2. ಈ ಸಂಗತಿಗಳಿಂದ ಹಾಲೀ ಮಸುವಿದಾ ಆಕ್ಟು ತಯಾರ್ಮಾಡಲ್ಪಟ್ಟಿತು. ಇತರ ಸಂಗತಿಗಳ ಶಿವಾಯಿ ಅದು ನಿಬಂಧಿಸುವದೇನಂದರೆ,

(a) ಕಂಡು ಹಿಡದವನು ನಿಕ್ಷೇಪ ಕಂಡು ಹಿಡದದ್ದನ್ನು ಕುರಿತು ಆ ಡಿಸ್ಟ್ರಿಕ್ಟು ಕಲೆಕ್ಟರವರಿಗೆ ನೋಟಿಸ್ ಕೊಡತಕ್ಕದ್ದು. ಆ ನಿಕ್ಷೇಪವನ್ನು ಸರಕಾರೆ ಖಜಾನೆಯಲ್ಲಿ ಡಿಪಾಜಿಟ್ ಇಡತಕ್ಕದ್ದು, ಅಥವಾ ಅಪೇಕ್ಷಿಸಿದಾಗ ಅದನ್ನು ಹಾಜರ್ಮಾಡಲಿಕ್ಕೆ ಜಾಮೀನ್ ಕೊಡತಕ್ಕದ್ದು.

(b) ಯಾವ ಸ್ಥಳದಲ್ಲಿ ನಿಕ್ಷೇವು ಕಂಡು ಹಿಡಿಯಲ್ಪಟ್ಟಿತ್ತೋ ಆ ಭೂಮಿಯ ಮೂಲೀಕ ಯಾ ಮೂಲೀಕರಿಗೆ ಬಂದು ನೋಟಿಸ್ ಕಲೆಕ್ಟರವರಿಂದ ಕೊಡಲ್ಪಡತಕ್ಕದ್ದು.

(c) ನಿಕ್ಷೇಪ ಕಂಡು ಹಿಡಿಯಲ್ಪಟ್ಟ ಸಂಗತಿಯು ಫಾಯಿಸ್ ಮಾಡತಕ್ಕದ್ದಲ್ಲದೆ ದರೋಬಸ್ತು ಹಕ್ಕು ದಾರು 6 ತಿಂಗಳೊಳಗಾಗಿ ಹಾಜರಾಗತಕ್ಕದ್ದೆಂದು ಕೂರಲ್ಪಡತಕ್ಕದ್ದು.

(d) ನಿಕ್ಷೇಪವು ನೂರು ವರುಷಗಳಿಗೆ ಹಿಂದೆ ಹೂಳಡಲ್ಪಟ್ಟಿದ್ದು ಯಾ ಇರಸಲ್ಪಟ್ಟಿದ್ದು ಯಂಬದಾಗಿ ನಂಬಲಿಕ್ಕೆ ಸಬಬು ಇದ್ದಲ್ಲಿ ಹೊರಗಿನವನ ಯಾವ ದಾವೆಯೂ ಅಂಗೀಕರಿಸಲ್ಪಡಕೂಡದು.

(e) ನಿಕ್ಷೇಪವು ಬಹಿರಂಗವಾದ ಬಂದು ಸ್ಥಳದಲ್ಲಿ ಅಂದರೆ ರಸ್ತೆ ಅಗಿಯುವಲ್ಲಿ ಹೊಗೇಬಂಡಿ ಮಾರ್ಗ ಅಗಿಯುವಲ್ಲಿ ಬಂದು ನಾಲೆ ಅಗಿಯುವಲ್ಲಿ ಕಂಡು ಹಿಡಿಯಲ್ಪಟ್ಟ ಸಂಗತಿಯೊಳಗೆ ಅಂತಾ ನಿಕ್ಷೇಪವು ನೂರು ವರುಷಗಳಿಗೆ ಮೇಲ್ಪಟ್ಟಿದ್ದಾದರೆ ಅಥವಾ ಅವಕ್ಕೆ ಯಾರೂ ದಾವೇ ಮಾಡದೇ ಇದ್ದರೆ ಆ ಪೈಕೀ ಮೂರುಪಾಲು ಕಂಡು ಹಿಡದವನಿಗೂ ಬಂದುಪಾಲು ಸರಕಾರಕ್ಕೂ ಸೇರತಕ್ಕದ್ದು.

(f) ಯಲ್ಲಿ ನಿಕ್ಷೇಪವು ಕಂಡು ಹಿಡಿಯಲ್ಪಟ್ಟಿತ್ತೋ ಅಂತಾ ಭೂಮಿ ಅಥವ ಯಿತರ ಸ್ವತ್ತು ಖುಷಿಬಾಷ್ ಜನಕ್ಕೆ ಸೇರಿ ಯಿರುವ ಪಕ್ಷದಲ್ಲಿ ನಿಕ್ಷೇಪ ಕಂಡು ಹಿಡಿದವನು ಅಂತಾ ಮೂಲೀಕ ಯಾ ಮೂಲೀಕರೊಂದಿಗೆ ಮುಂಚಿತವಾಗಿ ಯೇನಾದರೂ ವೊಂದು ಕರಾರು ಮಾಡಿಕೊಳ್ಳದೆ ಯಿದ್ದಲ್ಲಿ ಸದರೀ ಮೂಲೀಕನಿಗೆ ಸರಕಾರದ ಹಿಸ್ಸೆ ಸಲ್ಲತಕ್ಕದ್ದು. ಹಾಂಗೆ ಕರಾರು ಮಾಡಿಕೊಂಡಿರುವ ಪಕ್ಷದಲ್ಲಿ ಸದರೀ ಕರಾರು ಪ್ರಕಾರ ಭಾಗವು ಕ್ರಮವಡಿಸಲ್ಪಡತಕ್ಕದ್ದು.

3 ಈ ಮಸುವಿದಾ ಆಕ್ಟು, ಉತ್ತರ ಯೂರೋಪಿನಲ್ಲಿ ಈಚಿಗೆ ಮಾಡಲ್ಪಟ್ಟ ಮತ್ತು ಅಲ್ಲಿ ಚನ್ನಾಗಿ ನಡಿಯುವ ಕಾನೂನಿನ ನ್ಯಾಯವನ್ನು ಅಡಗಿಸಿಕೊಂಡಿರುತ್ತೆ.

ತಾರೀಖು 22ನೇ ನವಂಬರ್ 1876 ಪೊಸ್ಟ್ ಕಲ್ಕತ್ತಾ.

E. C. BAYLEY,

Mysore Government Press, Bangalore—1877.